ಕಥೆ



ಕೇಶವರೆಡ್ಡಿ ಹಂದ್ರಾಳ
ಕಲೆ: ರೂಪಶ್ರೀ ಕಲ್ಲಿಗನೂರು

# ಲೋಹದ ಹಕ್ಕಿ, ಪ್ಯಾಂಕ್ರಿಯಾಸ್ ಮತ್ತು ನಯಾಗರ



**The unexamined life is not worth living...**
**-socrates**

'ನೀವು ಹೀಗೆ ದಿನ ಬಿಟ್ಟು ದಿನ ವಿಮಾನದಲ್ಲಿ ಬೆಂಗಳೂರಿನಿಂದ ಮುಂಬಯಿಗೆ, ಮುಂಬಯಿಯಿಂದ ಬೆಂಗಳೂರಿಗೆ ಪ್ರಯಾಣಿಸುವುದರ ಬದಲು ಹೋಟೆಲ್ ತಾಜ್‌ನಲ್ಲಿ ಉಳಿದುಕೊಂಡು ವಾರಕ್ಕೊಮ್ಮೆ ಬೆಂಗಳೂರಿಗೆ ಬರಬಹುದಲ್ಲ. ಅಫ್ಫೋರ್ಸ್ ವಿಮಾನ ಟಿಕೆಟ್ ದರ, ಹೋಟೆಲ್ ಬಾಡಿಗೆ ಒಂದೇ ಆಗಿರುತ್ತದಲ್ಲ. ಓಡಾಡುವ strainನಿಂದ ನೀವು ಪಾರಾಗಬಹುದಲ್ಲ' ವಿಮಾನ ಟೇಕಾಫ್ ಆಗಿ ಅರ್ಧ ಗಂಟೆಯ ನಂತರ ಸ್ಮಿತಾ ಶರ್ವಾಣಿ ಎಂಬ ಚೀಫ್ ಏರ್ ಹೋಸ್ಟೆಸ್ ಬಿಸಿನೆಸ್ ಕ್ಲಾಸಿನಲ್ಲಿ ಪ್ರಯಾಣಿಸುತ್ತಿದ್ದ ಸಿದ್ಧಾರ್ಥ ಕುಮಾರನ ಪಕ್ಕ ಖಾಲಿಯಿದ್ದ ಸೀಟಿನಲ್ಲಿ ಕುಳಿತುಕೊಳ್ಳುತ್ತಾ ಕೇಳಿದ್ದಳು. ಸುಮಾರು ಒಂದು ವರ್ಷದಿಂದ ಬೆಳಗ್ಗೆ ಬೆಂಗಳೂರಿನಿಂದ ಮುಂಬಯಿಗೆ ಮತ್ತು ಸಂಜೆ ಮುಂಬಯಿಯಿಂದ ಬೆಂಗಳೂರಿಗೆ ಅವನು ರೆಗ್ಯುಲರ್ ಆಗಿ ದಿನ ಬಿಟ್ಟು ದಿನ ಪ್ರಯಾಣಿಸುತ್ತಿರುವುದನ್ನು ಅವಳು ಕಂಡಿದ್ದಳು. ಹೀಗೆ ವಾರದಲ್ಲಿ ಮೂರು ಬಾರಿ ರೆಗ್ಯುಲರ್ ಆಗಿ ಪ್ರಯಾಣಿಸುವ ಬೇರೆ ಪ್ರಯಾಣಿಕರು ಅವಳ ಕಣ್ಣಿಗೆ ಬಿದ್ದಿರಲಿಲ್ಲ. ಆತ ಬೆಂಗಳೂರಿನಲ್ಲಿ ವಾಸವಿದ್ದು ಮುಂಬಯಿಯಲ್ಲಿ ವ್ಯಾಪಾರ ವಹಿವಾಟು ನಡೆಸಲು ಹೀಗೆ ಸಂಚರಿಸುವ ಶ್ರೀಮಂತ ಉದ್ಯಮಿ ಇರಬಹುದೆಂದು ಅವಳು ಭಾವಿಸಿದ್ದಳು. ಹೀಗೆ ಸಂಚರಿಸುವಾಗ ಅವನು ವಿಮಾನದಲ್ಲಿ ಒಮ್ಮೆಯಾದರೂ ಯಾವುದೇ ತಿಂಡಿಯನ್ನಾಗಲೀ, ಪಾನೀಯವನ್ನಾಗಲೀ ಸೇವಿಸಿದ್ದನ್ನು ಅವಳೆಂದೂ ಕಂಡಿರಲಿಲ್ಲ. ಆದರೆ ಪ್ರತಿ ಪ್ರಯಾಣದಲ್ಲೂ ಒಮ್ಮೆ ಶೌಚಾಲಯವನ್ನು ತಪ್ಪದೇ ಬಳಸುತ್ತಿದ್ದ. ವಿಮಾನ ಹತ್ತುವಾಗ ಮತ್ತು ಇಳಿಯುವಾಗ ಒಂದು